ರಾಜ್ಯದಲ್ಲಿ ಬಾಲಕಾರ್ಮಿಕರ ನಿರ್ಮೂಲನೆ.

೨೯೦೨(೩೨೮೭)

ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್(ಹುಬ್ಬಳ್ಳಿ): ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

೧. ರಾಜ್ಯದಲ್ಲಿ ಬಾಲ ಕಾರ್ಮಿಕರ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

೨. ಬಾಲ ಕಾರ್ಮಿಕರ ಪದ್ಧತಿ ನಿರ್ಮೂಲನೆಗೆ ಪ್ರತಿಯೊಂದು ಜಿಲ್ಲೆಯಲ್ಲಿ ಯಾವುದಾದರೊಂದು ಯೋಜನೆ ಹಮ್ಮಿಕೊಳ್ಳಲಾಗಿದೆಯೆ?

೩. ಬಾಲ ಕಾರ್ಮಿಕರನ್ನು ಗುರುತಿಸಿ ಅವರ ಭವಿಷ್ಯಕ್ಕಾಗಿ, ಭವಿಷ್ಯ ನಿಧಿ ಯೋಜನೆಯನ್ನು ಸರ್ಕಾರ ಅಸ್ತಿತ್ವಕ್ಕೆ ತರಲಾಗಿದೆಯೆ?

೪. ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು?

ಶ್ರೀ ಎ.ಎಂ.ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು):

೧. ೧೯೯೭ರಲ್ಲಿ ರಾಜ್ಯದಲ್ಲಿ ಸಂಸ್ಥೆವಾರು ಬಾಲ ಕಾರ್ಮಿಕರ ಸಮೀಕ್ಷೆ ನಡೆಸಲಾಗಿದ್ದು ೩೦-೬-೨೦೦೦ ಕೊನೆವರೆಗೆ ಒಟ್ಟು ೪೫,೮೨೩ ಬಾಲ ಕಾರ್ಮಿಕರಿರುವುದು ಕಂಡು ಬಂದಿರುತ್ತದೆ. (ಜಿಲ್ಲಾವಾರು ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ನಮೂದಿಸಲಾಗಿದೆ)

೨. ಭಾರತ ಸರ್ಕಾರದ ಮಟ್ಟದಲ್ಲಿ ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆಯನ್ನು ಹಮ್ಮಿಕೊಂಡಿದ್ದು ರಾಜ್ಯದ ೪ಳು ಜಿಲ್ಲೆಗಳನ್ನು ಇದರಲ್ಲಿ ಒಳಪಡಿಸಲಾಗಿದ್ದು ಒಟ್ಟು ೧೯೧ ವಿಶೇಷ ಶಾಲೆಗಳನ್ನು ಮಂಜೂರು ಮಾಡಲಾಗಿದೆ. ಈಗಾಗಲೇ ೧೦೫ ಶಾಲೆಗಳನ್ನು ತರೆದು ನಡೆಸಲಾಗುತ್ತಿದೆ.

ಎಲ್ಲಾ ಜಿಲ್ಲೆಗಳಿಗೂ ಅನ್ವಯಿಸುವಂತೆ ಕರ್ನಾಟಕ ಸರ್ಕಾರವು ಬಾಲ ಕಾರ್ಮಿಕರ ನಿರ್ಮೂಲನೆಗಾಗಿ ಕ್ರಿಯಾ ಯೋಜನೆಯನ್ನು ಅನುಮೋದಿಸಿದ್ದು ಈ ಕ್ರಿಯಾ ಯೋಜನೆಯಲ್ಲಿ ಬಾಲ ಕಾರ್ಮಿಕರಿಗೆ ವಿಶೇಷ ವಸತಿ ಶಾಲೆಗಳನ್ನು ಪ್ರಾರಂಭಿಸಿ ಪುನರ್ವಸತಿ ಕಲ್ಪಿಸಲಾಗುವುದು.

೩. ಇಲ್ಲ.

೪. ರಾಜ್ಯದಲ್ಲಿ ಸುಮಾರಾಗಿ ಎಲ್ಲಾ ವೃತ್ತಿ ಮತ್ತು ಪ್ರಕ್ರಿಯಗಳಲ್ಲಿ ಬಾಲ ಕಾರ್ಮಿಕರ ನೇಮಕಾತಿಯನ್ನು ನಿಷೇಧಿಸಿರುವ ಪ್ರಯುಕ್ತ ಅವರಿಗೆ ಭವಿಷ್ಯ ನಿಧಿ ಯೋಜನೆಯನ್ನು ಅಸ್ಥಿತ್ವಕ್ಕೆ ತರುವ ಪ್ರಮೇಯವಿರುವುದಿಲ್ಲ.

ಬಾಲ ಕಾರ್ಮಿಕರ ಜಿಲ್ಲಾವಾರು ವಿವರಗಳು.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಬಾಲ ಕಾರ್ಮಿಕರ ಒಟ್ಟು ಸಂಖ್ಯೆ: ೩೦-೬-೨೦೦೦ದಲ್ಲಿದ್ದಂತೆ		
		ಅಪಾಯಕಾರಿ	ಅಪಾಯಕಾರಿ ಅಲ್ಲದ	ಒಟ್ಟು
೧)	ಕರ್ನಾಟಕ	೩೧೮೨	೪೨೬೪೧	೪೫೪೨೩
೧)	ಬೆಂಗಳೂರು(ನಗರ)	೨೪೭	೭೦೩೫	೭೨೪೨
೨)	ಬೆಂಗಳೂರು (ಗ್ರಾಮಾಂತರ)	-	೧೯೪೪	೧೯೪೪
೩)	ಬೆಳಗಾಂ	೧೫	೧೪೩	೧೯೪
೪)	ಬಳ್ಳಾರಿ	೯೪೨	೪೭೪೩	೫೭೬೪
೫)	ಬೀದರ್	೧೦೩	೪೫೨೬	೪೬೨೯
೬)	ಬಿಜಾಪುರ	-	೧೧೫	೧೧೫
೭)	ಬಾಗಲಕೋಟೆ	೩೩	೨೩೨	೨೬೫
೮)	ಚಿತ್ರದುರ್ಗ	೫೬	೧೨೪೩	೧೩೯೯
೯)	ಚಿಕ್ಕಮಗಳೂರು	೫೩	೧೩೭೦	೧೪೨೩
೧೦)	ಚಾಮರಾಜನಗರ	೧೪೩	೨೧೧	೩೯೪
೧೧)	ದಕ್ಷಿಣ ಕನ್ನಡ	೧೯	೧೪೩	೨೦೨
೧೨)	ಧಾರವಾಡ	೧೭	೪೬೪	೪೪೧
೧೩)	ದಾವಣಗೆರೆ	೪೩೬	೩೦೧೪	೩೪೫೪
೧೪)	ಗುಲ್ಬರ್ಗಾ	೪೫	೧೧೦೯	೧೧೫೪

೧೫)	ಗದಗ್	೧	೪೩	೪೪
೧೬)	ಹಾಸನ	೬	೯೬೨	೯೬೮
೧೭)	ಹಾವೇರಿ	೨೫	೨೬೮	೨೯೩
೧೮)	ಕೊಡಗು	೨೨	೧೭೯	೨೦೧
೧೯)	ಕೋಲಾರ	೩೪೫	೨೪೯೪	೨೮೩೯
೨೦)	ಕೊಪ್ಪಳ	೭೫	೧೬೧೮	೧೬೯೩
೨೧)	ಮಂಡ್ಯ	-	೧೦೪೨	೧೦೪೨
೨೨)	ಮೈಸೂರು	೨೦	೨೮	೪೮
೨೩)	ರಾಯಚೂರು	-	೨೪೨೫	೨೪೨೫
೨೪)	ಶಿವಮೊಗ್ಗ	೧೨	೮೨೩	೮೩೫
೨೫)	ತುಮಕೂರು	೩೩	೫೭೮೪	೫೮೧೭
೨೬)	ಉತ್ತರ ಕನ್ನಡ	೨೯	೩೯೦	೪೧೯
೨೭)	ಉಡುಪಿ	೨೫	೧೨೬	೧೫೧